ಪಡೆಯಬಹುದಾಗಿದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಇವೊತ್ತೇ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಮಾನ್ಯ ಅಧ್ಯಕ್ಷರೇ, ನಾನು ಮಾಹಿತಿಯನ್ನು ಕೇಳುತ್ತಿಲ್ಲ.

ಅಧ್ಯಕ್ಷರು: ನಾನು ನಿಮ್ಮ ಸಮಸ್ಯೆ ಏನೆಂಬುದನ್ನು ಹೇಳುತ್ತೇನೆ, ನೀವು ಕುಳಿತುಕೊಳ್ಳಿ, ಮಂಜುನಾಥ್‌ರವರು ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ತಕ್ಷಣಕ್ಕೆ 10 ಲಕ್ಷ ರೂಪಾಯಿಗಳನ್ನು ಅಲ್ಲಿಗೆ ಬಿಡುಗಡೆ ಮಾಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಇರತಕ್ಕಂಥ ಏರ್ಪಾಡನ್ನು ಮಾಡುತ್ತೇನೆ.

(6) ಚಿಂಚೋಳಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೇ, ಈ ರೈತರುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಈ ಸದನದಲ್ಲಿ ಬಹಳಷ್ಟು ಸಲ ಚರ್ಚೆಗೆ ಬಂದಿದೆ. ಅಂಥ ಒಂದು ಘಟನೆ ಮೊನ್ನೆ ಚಿಂಚೋಳಿಯಲ್ಲಿ ಆಗಿದ್ದು ಪತ್ರಿಕೆಗಳಲ್ಲಿಯೂ ಕೂಡ ಅದು ಬಂದಿದೆ. ಸರ್ಕಾರದವರು ಸದನ ಸಮಿತಿಯನ್ನು ರಚಿಸಿದ್ದಾರೆ. ಈ ಜಂಟೀ ಸದನ ಸಮಿತಿ ಭೇಟಿ ಕೊಟ್ಟು ಹೋಗಿ ಬಂದಿದ್ದರೂ ಕೂಡ ಇಲ್ಲಿಯವರೆವಿಗೆ ರಿಪೋರ್ಟ್‌ನ್ನು ಕೊಟ್ಟಿಲ್ಲ. ಆದರೆ ಆ ವರದಿ ಬಂದಮೇಲೆ ಏನು ಕ್ರಮ ಜರುಗಿಸುತ್ತಾರೋ ನೋಡೋಣ. ಇದರ ಬಗ್ಗೆ ಕಂದಾಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಜಂಟೀ ಸದನ ಸಮಿತಿಯನ್ನು ರಚಿಸಿದ್ದೇವೆ. ಅವರಿಗೆ ಆದಷ್ಟು ಬೇಗ ವರದಿಯನ್ನು ಕೊಡಬೇಕೆಂದು ತಿಳಿಸಿದ್ದ ಕಾರಣ ಈಗ ವರದಿಯನ್ನು ಕೊಟ್ಟಿರಬಹುದು ಎಂದು ಕಾಣಿಸುತ್ತದೆ. ಆ ವರದಿ ಬಂದ ತಕ್ಷಣ ಅದನ್ನು ಪರಿಶೀಲನೆ ಮಾಡಿ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(7) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆ ಕಾರ್ಯಕ್ರಮ

+ ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ 26ನೇ ತಾರೀಖು ಭಾನುವಾರ ನಿವೇಶನಗಳ ಹಂಚಿಕೆ ಕಾರ್ಯಕ್ರಮವನ್ನು ನಿಶ್ಚಯ ಮಾಡಿದ್ದಾರೆ. ಈಗಾಗಲೇ ಈ ಹಿಂದೆಯೇ ಇದರ ಬಗ್ಗೆ

ವಿಷಯ ಚರ್ಚೆಯಾಗಿ ನ್ಯಾಯಾಲಯದಲ್ಲಿ ನಿವೇಶನಗಳು ಪೂರ್ಣವಾಗಿ ರಚನೆಯಾಗುವವರೆಗೂ ಕೂಡ ಅವುಗಳನ್ನು ಕೊಡಬಾರದು ಎಂದು ಹೇಳಲಾಗಿತ್ತು. ಅದರ ಜೊತೆಗೆ ಹೊಸದಾಗಿ ನೋಟಿಫಿಕೇಶನ್ ಹಾಕಿ ಪತ್ರಿಕೆಗಳ ಮುಖಾಂತರ ಅದರ ಬಗ್ಗೆ ಜಾಹಿರಾತನ್ನು ಕೊಟ್ಟು ಹೊಸದಾಗಿ ಅರ್ಜಿಗಳನ್ನು ಕರೆಯುವುದಲ್ಲದೇ ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 30 ಭಾಗದ ನಿವೇಶಗಳನ್ನು ತೆಗೆದಿಟ್ಟು ಆ ಬಗ್ಗೆ ಸೂಚನೆಯನ್ನು ಕೊಟ್ಟ ನಂತರವೇ ನಿವೇಶನ ಹಂಚಿಕೆಯನ್ನು ಕೊಡಬೇಕೆಂದು ಮುಡಾ ಆ್ಯಕ್ಟ್‌ನಲ್ಲಿದ್ದರೂ ಕೂಡ ನ್ಯಾಯಾಲಯದ ಆಜ್ಞೆಯನ್ನು ಉಲ್ಲಂಘನೆ ಮಾಡಿ ದಿನಾಂಕ 26ನೇ ತಾರೀಖು ನಿವೇಶನಗಳ ಹಂಚಿಕೆ ಕಾರ್ಯಕ್ರಮವನ್ನು ಇಟ್ಟುಕೊಂಡಿರುವ ಬಗ್ಗೆ ಈಗಾಗಲೇ ಆಹ್ವಾನ ಪತ್ರಿಕೆಯನ್ನೂ ಕೂಡ ಹಂಚಿದ್ದಾರೆ. ವಿಶೇಷವಾಗಿ ಕಾನೂನಿಗೆ ವಿರುದ್ಧವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರ ವಿರುದ್ಧವಾಗಿ ನಿವೇಶನವನ್ನು ಹಂಚುತ್ತಿರುವ ಮತ್ತು ಇದರ ಜೊತೆಯಲ್ಲಿ ಯಾರಿಗೆ ನಿವೇಶನವನ್ನು ಕೊಡುತ್ತಿದ್ದೇವೆ ಎನ್ನುವುದನ್ನು ಪ್ರಾಧಿಕಾರದ ಸಭೆಯಲ್ಲಿ ಒಪ್ಪಿಗೆಯನ್ನೇ ಪಡೆದಿಲ್ಲ. ಆ ಪ್ರಾಧಿಕಾರದ ಸಭೆಯಲ್ಲಿ ಒಬ್ಬ ಶಾಸಕನ್ನಾದರೂ ಇಟ್ಟುಕೊಂಡು ಕಾನೂನಿನ ಪ್ರಕಾರ ನಿವೇಶನ ಹಂಚಿಕೆ ಸಮಿತಿಯನ್ನು ಮಾಡಬೇಕಾಗಿತ್ತು. ಆ ಹಂಚಿಕೆ ಸಮಿತಿಯನ್ನು ಮಾಡದೇ ಮುಡಾದವರ ಅಪ್ರೂವ್‌ಲ್ ತೆಗೆದುಕೊಳ್ಳದೇ ಈ ಕಾರ್ಯಕ್ರಮವನ್ನು ನಿಯೋಜಿಸಿದ್ದಾರೆ. ಈ ನಿವೇಶನಗಳನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ನಿವೇಶನಗಳನ್ನು ಹಂಚುತ್ತಾರೆಂಬ ಜಾಹಿರಾತನ್ನೂ ಕೂಡ ಕೊಡಲಾಗಿದೆ. ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ ಯಾವುದೇ ಸಂದರ್ಭದಲ್ಲೂ ಕೂಡ ಪ್ರಾಧಿಕಾರ ಅಪ್ರೂವಲ್ ಮಾಡುವವರೆಗೆ ಈ ನಿವೇಶನ ಹಂಚಿಕೆ ಕಾರ್ಯಕ್ರಮವನ್ನು ಮಾಡಬಾರದೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಮೂಡಾದಲ್ಲಿ ಎಂ.ಎಲ್.ಎಗಳು ಕೂಡ ಮೆಂಬರ್ ಇದ್ದಾರೆ. ಅಲ್ಲಿ ಸೈಟ್ ಹಂಚುತ್ತೇವೆಂದು ಹೇಳಿ ಇನ್‌ವಿಟೇಷನ್ ಎಲ್ಲಾ ನನಗೆ ಗೊತ್ತಿರುವ ಮಟ್ಟಿಗೆ ಮಾಡಿದ್ದಾರೆ. ಆದರೆ ಈಗ ಏನಾಗಿದೆಯೆಂದರೆ ಬೈ ಎಲೆಕ್ಷನ್ ಅನೌನ್ಸ್ ಆಗಿರುವುದರಿಂದ ಆ ಕಾರ್ಯಕ್ರಮ ನಡೆಯುವುದಿಲ್ಲ. ಅದು ಮುಂದಕ್ಕೆ ಹೋಗಿದೆ. ಇವರು ಏನು ಹೇಳಿದ್ದಾರೆ ಅದರ ಬಗಗೆ ಚರ್ಚೆ ಮಾಡುತ್ತೇವೆ.

8. ಉಡುಪಿ ತಾಲ್ಲೂಕಿನ ಕೊಡವರು ಗ್ರಾಮದ ಕಲ್ಮಾಡಿ ಎಂಬಲ್ಲಿ 90 ಲಕ್ಷ ರೂಪಾಯಿ ವೆಚ್ಚದ ಕಾಲು ಸೇತುವೆ ಕಾರ್ಯಕೈಗೊಳ್ಳುವ ಕುರಿತು

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ನನ್ನ ಉಡುಪಿ ತಾಲ್ಲೂಕಿನ ಕೊಡವರು ಗ್ರಾಮದ ಕಲ್ಮಾಡಿಯೆಂಬಲ್ಲಿ 90 ಲಕ್ಷ ರೂಪಾಯಿಗಳ ವೆಚ್ಚದ ಒಂದು ಕಾಲು ಸೇತುವೆಯನ್ನು ಒಳಗೊಂಡಂತೆ ಉಪ್ಪು ನೀರಿಗೆ ಅಣೆಕಟ್ಟಿನ ನಿರ್ಮಾಣಕ್ಕಾಗಿ 1991ರಲ್ಲಿ ಮಂಜೂರಾಗಿತ್ತು. ಅದಕ್ಕೆ ಟೆಂಡರ್ ಕರೆದಿದ್ದರು, ಟೆಂಡರ್ ಕರೆದು ವರ್ಕ್